ಸಬ್‌ಇನ್ಸ್‌ಪೆಕ್ಟರನ್ನು ನೇಮಕ ಮಾಡುವುದು

195 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರ ಪೋಲೀಸ್ ಇಲಾಖೆಗೆ ಎಷ್ಟು ಜನ ಸಬ್-ಇನ್ಸ್‌ಪೆಕ್ಟರ್‌ರನ್ನು ನೇಮಕ ಮಾಡಲು ಈ ಹಿಂದೆ ಕ್ರಮ ಕೈಗೊಂಡಿದ್ದು. ಈ ಸಂದರ್ಭದಲ್ಲಿ ಸ್ವೀಕರಿಸಿದ್ದ ಅರ್ಜಿಗಳೆಷ್ಟು;*

ಆ) *ಈ ಪೈಕಿ ಮೌಖಿಕ ಸಂದರ್ಶನಕ್ಕೆ ಹಾಜರಾದ ಸಂಖ್ಯೆ ಎಷ್ಟು;*

ಇ) *ಅಂತಿಮವಾಗಿ ಆಯ್ಕೆಯಾದವರು ಎಷ್ಟು ಜನ. (ಇವರುಗಳ ಹೆಸರು ಮತ್ತು ವಿಳಾಸ ಒದಗಿಸುವುದು)*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು)

ಅ) 1) 194 ಹುದ್ದೆಗಳು.

2) 22,079 ಅರ್ಜಿಗಳು.

ಆ) 1,449.

ಇ) ಶ್ರೀ ಎನ್.ವೈ. ಹಾದಿಮನಿ ಮತ್ತು ಏಳು ಜನರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ ಅರ್ಜಿ ಸಂಖ್ಯೆ: 2842-54 ದಿನಾಂಕ 17-8-94ರಂದು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಬಾರದಾಗಿ ತಡೆಯಾಜ್ಞೆಯನ್ನು ನೀಡಿರುತ್ತದೆ. ಸದರಿ ತಡೆಯಾಜ್ಞೆಯು ಇನ್ನೂ ಕೂಡ ಜಾರಿಯಲ್ಲಿರುವುದರಿಂದ ಪೋಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿರುವುದಿಲ್ಲ.

ಗಂಗಾನಗರದಲ್ಲಿ ಒಳಚರಂಡಿ ವ್ಯವಸ್ಥೆ

197 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಜಯಮಹಲ್ ಕ್ಷೇತ್ರದ ಗಂಗಾನಗರ ಹಾಗೂ ರಹಮತ್ ನಗರದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ನಿರ್ಮಿಸಲು ಸರ್ಕಾರದವರು ಕ್ರಮ ಕೈಗೊಂಡಿರುವರೆ*

ಆ) *ಹಾಗಿದ್ದಲ್ಲಿ 1994-95ರಲ್ಲಿ ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು?*

ಇ) *ಈ ಕೆಲಸಕ್ಕಾಗಿ ತಗಲುವ ವೆಚ್ಚವೆಷ್ಟು?*

ಈ) *1995-96ರಲ್ಲಿ ಒಳಚರಂಡಿ ಕೆಲಸವನ್ನು ಪೂರ್ಣಗೊಳಿಸಲಾಗುವುದೇ?*

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಯವರು):

ಅ) ಈ ಪ್ರದೇಶದಲ್ಲಿ ಈಗಾಗಲೇ ಒಳಚರಂಡಿ ವ್ಯವಸ್ಥೆ ಇರುತ್ತದೆ. ಒಳಚರಂಡಿ ವ್ಯವಸ್ಥೆ ಇಲ್ಲದಿರುವ ಭಾಗಗಳಲ್ಲಿ ಬೆಂಗಳೂರು ಮಹಾನಗರಪಾಲಿಕೆಗೆ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದೆ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.

ಜಯಮಹಲ್ ವಿಧಾನ ಸಭಾಕ್ಷೇತ್ರಕ್ಕೆ ನೀರು ಸರಬರಾಜು

198 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬೆಂಗಳೂರಿನ ಜಯಮಹಲ್ ವಿಧಾನಸಭಾ ಕ್ಷೇತ್ರದಲ್ಲಿ ಯಾವ ಯಾವ ಬಡಾವಣೆಗಳಿಗೆ ಕುಡಿಯುವ ನೀರು ಸರಬರಾಜು ಹಾಗೂ ನೈರ್ಮಲೀಕರಣ ಯೋಜನೆಯನ್ನು ತಯಾರು ಮಾಡಲಾಗಿದೆ.*

2. *ಹಾಗಿದ್ದರೆ, ಈ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಜಲಮಂಡಳಿಯ ಖರ್ಚು ಮಾಡಿರುವ ಹಣದ ಪ್ರಮಾಣವೆಷ್ಟು?*

3. *ಜಯಮಹಲ್ ವಿಧಾನಸಭಾ ಕ್ಷೇತ್ರದಲ್ಲಿರುವ ಅಣ್ಣಯ್ಯಪ್ಪ ಬ್ಲಾಕ್ ಮುದ್ದಮ್ಮ ಗಾರ್ಡನ್, ಗಂಗಾನಗರ, (ಉತ್ತರ) ವಸಂತಪ್ಪ ಬ್ಲಾಕ್ ಮುಂತಾದ ಕಡೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲದೆ ನಾಗರಿಕರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

4. *ಜಯಮಹಲ್ ವಿಧಾನಸಭಾ ಕ್ಷೇತ್ರದಲ್ಲಿರುವ ಎಲ್ಲಾ ಬಡಾವಣೆಗಳಿಗೆ ಕುಡಿಯುವ ನೀರು ಹಾಗೂ ಒಳಚರಂಡಿ ಸೌಲಭ್ಯಗಳನ್ನು ಒದಗಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು) :

1. ಜಯಮಹಲ್ ಕ್ಷೇತ್ರದ ಕೌಸರ್‌ನಗರ ಹಾಗೂ ಎಕ್ಸ್-ಸರ್ವೀಸ್‌ಮೆನ್ ಬಡಾವಣೆಗಳಿಗೆ ನೀರು ಸರಬರಾಜು ಒದಗಿಸುವ ಯೋಜನೆಯನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ. ಇದಲ್ಲದೆ, ಉಳಿದ ಪ್ರದೇಶಗಳಿಗೆ ನೀರು ಸರಬರಾಜು ಮತ್ತು ನೈರ್ಮಲೀಕರಣ ವ್ಯವಸ್ಥೆಯ ಯೋಜನೆಯನ್ನು ತಯಾರಿಸಲಾಗಿದೆ.

2. ಕೌಸರ್‌ನಗರಕ್ಕೆ 9.5 ಲಕ್ಷ ರೂಪಾಯಿಗಳು ಹಾಗೂ ಎಕ್ಸ್-ಸರ್ವಿಸ್‌ಮೆನ್ ಬಡಾವಣೆ 3.00 ಲಕ್ಷ ರೂಪಾಯಿಗಳನ್ನು ಇದುವರೆಗೆ ಖರ್ಚು ಮಾಡಲಾಗಿದೆ.

3. ಬಂದಿದೆ.